ದಿನಾಂಕಃ 12.03.2026
ಅಸಲುದಾವಃ 219/2022
ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಿಪಿ20 ಮತ್ತು 21 ಈ ದಾವ ದಾಖಲಿಸುವ ಪೂರ್ವದಲ್ಲಿಯೇ ನಿಮ್ಮ ಬಳಿ ಇತ್ತು ಎಂದರೆ ಸಾಕ್ಷಿ ಇತ್ತು ಎಂದು ಉತ್ತರಿಸುತ್ತಾರೆ. ನಿಪಿ22 ಸಹ ದಾವ ದಾಖಲಿಸುವ ಪೂರ್ವದಲ್ಲಿಯೇ ನನ್ನ ಬಳಿ ಇತ್ತು ಎಂದರೆ ಸರಿ. ಸದರಿ ದಾಖಾಲತಿಗಳನ್ನು ಯಾವ ಕಾರಣಕ್ಕೆ ದಾವ ದಾಖಲಿಸುವ ಸಮಯದಲ್ಲಿ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆಯ ಬಳಿ ಇದ್ದವು, ಅವುಗಳನ್ನು ಹಾಜರು ಪಡಿಸುವ ಅವಶ್ಯಕತೆ ಇಲ್ಲ ಎಂದು ಸುಮ್ಮನಾಗಿದ್ದೆ ನಂತರ ಅವುಗಳನ್ನು ನಮ್ಮ ತಂದೆಯ ಬಳಿ ಹುಡುಕಿ ಹಾಜರು ಪಡಿಸಿದ್ದೇನೆಎಂದು ಉತ್ತರಿಸುತ್ತಾರೆ. ನಿಪಿ20 ಮತ್ತು 21ರಲ್ಲಿ ನಮೂದಿರುವ ಮಂಚಯ್ಯ ಎಂದರೆ ಯಾರು ಎಂಬ ಪ್ರಶ್ನೆಗೆ ಸಾಕ್ಷಿ ಮರಿಲಿಂಗಮ್ಮನವರ ಗಂಡ ಎಂದು ಉತ್ತರಿಸುತ್ತಾರೆ. ಮಂಚಯ್ಯನವರ ತಂದೆಯ ಹೆಸರು ಹೊಂಬಾಳೆ ಮಂಚಯ್ಯ. ಸಾಕ್ಷಿ ಪುನಃ ಹೇಳುತ್ತಾರೆ ಹೊಂಬಾಳೆ ಕರಿಯಯ್ಯ ಎಂದು. ದಡಿಯ ಬಿನ್ ಹೊಂಬಾಳೆ ಎಂದರೆ ಯಾರು ಎಂದರೆ ಸಾಕ್ಷಿ ಹೊಂಬಾಳಯ್ಯನ ತಮ್ಮ, ಇವರು ನನ್ನ ಚಿಕ್ಕಪ್ಪ ಎಂದು ಉತ್ತರಿಸುತ್ತಾರೆ. ನನ್ನ ತಂದೆಯ ಹೆಸರು ಹೊಂಬಾಳಯ್ಯ. ಮರಿಲಿಂಗಮ್ಮನವರ ಕುಟುಂಬದವರು ಮತ್ತು ನಿಮ್ಮ ಕುಟುಂಬದವರು ಜಂಟಿಯಾಗಿ ಇದ್ದರು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಆ ದಾಖಲಾತಿಯನ್ನು ಎಲ್ಲಿಂದ ಮಾಡಿಸಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ನಾಡ ಕಛೇರಿಯಿಂದ ಮಾಡಿಸಿಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿ ಮರಿಲಿಂಗಮ್ಮನ ಗಂಡ ಮಂಚಯ್ಯನವರ ತಂದೆ ಹೊಂಬಾಳೆ ಕರಿಯಯ್ಯ, ದಡಿಯ ಬಿನ್ ಹೊಂಬಾಳೆ ಮತ್ತು ನಿಮ್ಮ ತಂದೆ ಹೊಂಬಾಳಯ್ಯ ರವರು ಜೀವಿತಾವಧಿಯಲ್ಲಿಯೇ ಬಾಯಿ ಮಾತಿನ ಮುಖಾಂತರ ವಿಭಾಗ ಮಾಡಿಕೊಂಡಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ.98/3, 98/4 ಈ ಎರಡೂ ಆಸ್ತಿಗಳು ಮಂಚಯ್ಯನವರ ತಂದೆ ಹೊಂಬಾಳೆ ಕರಿಯಯ್ಯನವರ ಭಾಗಕ್ಕೆ ಬಂದಿದೆ

ಎಂದರೆ ಸಾಕ್ಷಿ ಇಲ್ಲ, ಜಂಟಿ ಎಂದು ನೋಟೀಸಿನಲ್ಲಿ ಬಂದಿದೆ ಎಂದು ಉತ್ತರಿಸುತ್ತಾರೆ. ನಿಪಿ20-21 ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ22 ಎಲ್.ಎ.ಸಿ 9/2007 ರಲ್ಲಿ ನೀವು ಅರ್ಜಿ ಹಾಕಿ ಪಕ್ಷಕಾರರಾಗಿ ಸೇರಿಸಲು ಕೇಳಿದ ಅರ್ಜಿ ವಜಾ ಆಗಿತ್ತು ಎಂದರೆ ಸಾಕ್ಷಿ ಸುಳ್ಳು, ಇದೇ ನ್ಯಾಯಾಲಯದಲ್ಲಿ ಅವಾರ್ಡ್ ಆದೇಶವೂ ಆಗಿದೆ, ಹಣವೂ ಬಂದಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ಅರ್ಜಿ ವಜಾ ಆಗಿದ್ದ ಕಾರಣದಿಂದಲೇ ನೀವು ದಾವ ಹಾಕುವ ಸಮಯದಲ್ಲಿ ನಿಪಿ22 ಎಲ್.ಎ.ಸಿ 9/2007 ರ ಆದೇಶವನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಪಿ23 ಮರಿಲಿಂಗಮ್ಮ ಕೊಂ ಲೇಟ್ ಮಂಚಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಇಲ್ಲ, ನನ್ನ ತಂದೆಯ ಹೆಸರೂ ಇದೆ ಜಂಟಿಯಾಗಿ ಇದೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆಯ ಹೆಸರು ಹೊಂಬಾಳಯ್ಯ, ಮರಿಲಿಂಗಮ್ಮನ ಮಾವನ ಹೆಸರೂ ಹೊಂಬಾಳಯ್ಯ, ಹಾಗಾಗಿ ಹೊಂಬಾಳಯ್ಯ ಎಂದು ಬಂದಿರುವುದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಪಿ24 ರಲ್ಲಿ ಬರೆದಿರುವುದು ಸರಿಯಾ ಎಂದರೆ ಸಾಕ್ಷಿ ಅವರೇ ಬರೆಸಿರುವುದು ಎಂದು ಉತ್ತರಿಸುತ್ತಾರೆ. ನಿಪಿ24 ರಲ್ಲಿ ಬರೆದಿರುವ ಬರವಣಿಗೆ ಮತ್ತು ಎನ್.ಟಿ.ಎಂ ಗುರುತು ಮಾಡಿ ಬರೆದಿರುವ ಬರವಣಿಗೆ ಪೆನ್ನುಗಳು ಬೇರೆ ಬೇರೆ ಮತ್ತು ಕೈಬರವಣಿಗೆಯೂ ಬೇರೆ ಬೇರೆ ಎಂದರೆ ಸಾಕ್ಷಿ ಮರಿಲಿಂಗಮ್ಮ, ಅವರ ಮಗ ಕೃಷ್ಣ, ಮಂಚಯ್ಯನ ತಮ್ಮ ರಾಜಣ್ಣ, ನನ್ನ ತಂದೆ ಹೊಂಬಾಳಯ್ಯ, ಅವರ ತಮ್ಮ ಮರಿಯಯ್ಯ ಮತ್ತು ದಡಿಯ ಎಲ್ಲರೂ ಕೂತು ಬರೆಸಿರುವುದು ಎಂದು ಉತ್ತರಿಸುತ್ತಾರೆ. ಸಾಕ್ಷಿದಾರರ ಸಹಿಗಳು ಬೇರೆ ಪೆನ್ನಿನಲ್ಲಿ ಇದೆ ಎಂದರೆ ಸಾಕ್ಷಿ ಅವರು ಬರೆಸಿರುವುದು ಒಂದೇ ಪೆನ್ನಿನಲ್ಲಿ ಎಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಮೇಲ್ಕಂಡ ನಿರ್ವಾಹಣ ಜವಾಬ್ದಾರಿಯನ್ನು ಹೊಂಬಾಳಯ್ಯನವರ ಮಗ ಹೆಚ್.ಮಧುಸೂದನ್ ಅವರು ನಿರ್ವಹಿಸುತ್ತಾರೆ ಎಂದು ಆ ನಂತರದಲ್ಲಿ ಬರೆದು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2017 ರಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನಿಪಿ24 ರ ಪ್ರಕಾರ ನೀವೆಲ್ಲರೂ ಆಗಲೇ ಹಣ ಪಡೆದುಕೊಂಡಿರುವುದಾಗಿ ಬರೆದಿದೆ ಎಂದರೆ ಸಾಕ್ಷಿ ಎಲ್ಲಾ ತೆಗೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ22 ರಿಂದ 27 ಗಳನ್ನು ಈ ಕೇಸಿಗೊಸ್ಕರ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿ ಇದು ಮಂಚಯ್ಯನವರ ತಂದೆ ಹೊಂಬಾಳೆ ಕರಿಯಯ್ಯರವರ ವಂಶವೃಕ್ಷ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಅದು ಪೂರ್ತಿ ವಂಶವೃಕ್ಷವಲ್ಲ, ಹೊಂಬಾಳೆ ಕರಿಯಯ್ಯನವರ ಕುಟುಂಬದ

ವಂಶವೃಕ್ಷ ಮಾತ್ರ ಎಂದು ಉತ್ತರಿಸುತ್ತಾರೆ. ಮರಿಲಿಂಗಮ್ಮನವರಿಗೆ ಜಯಮ್ಮ, ಕೃಷ್ಣ, ರತ್ನಮ್ಮ, ಎ.ಎಂ.ಹೊಂಬಾಳಯ್ಯನವರ ಅಪ್ಪಾಜಿ ಮತ್ತು ಸರೋಜಮ್ಮ ಅವರ ಮಕ್ಕಳು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಮಂಚಯ್ಯನವರ ತಮ್ಮ ರಾಜಣ್ಣ ಎಂದರೆ ಸರಿ, ಆದರೆ ಅದರಲ್ಲಿ ಇರುವುದೆಲ್ಲಾ ಸುಳ್ಳು ಎಂದು ಉತ್ತರಿಸುತ್ತಾರೆ. ಎ.ಎಂ.ಹೊಂಬಾಳಮ್ಮನವರ ಅಪ್ಪಾಜಿ ಅವರ ಹೆಂಡತಿ ವಿನೋಧ ಇವರನ್ನು 2 ನೇ ಪ್ರತಿವಾದಿಯಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ವಿನೋಧರವರ ಗಂಡನ ಹೆಸರು ಅಪ್ಪಾಜಿ ಎಂದು ಉತ್ತರಿಸುತ್ತಾರೆ. ವಿನೋಧ ಮತ್ತು ಎ.ಎಂ.ಹೊಂಬಾಳಮ್ಮನವರ ಅಪ್ಪಾಜಿ ಇವರ ಮಕ್ಕಳು ಮೇಘನ ಮತ್ತು ಮನೋಜ್ ಎಂದರೆ ಸರಿ. ಮನೋಜ್ ಈಗಾಗಲೆ 3 ನೇ ಪ್ರತಿವಾದಿ ಎಂದರೆ ಸರಿ. ಈಗ ತೋರಿಸಿದ ವಂಶವೃಕ್ಷವನ್ನು ಒಪ್ಪಿಕೊಂಡರೆ ನಿಮ್ಮ ಕೇಸಿಗೆ ತೊಂದರೆಯಾಗುತ್ತದೆ ಎಂದು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಪಿ24 ರಲ್ಲಿ ನಮೂದಿರುವಂತೆ ನೀವು ಎಲ್.ಎ.ಸಿ ಪರಿಹಾರದ ಹಣವನ್ನು 2004 ರಲ್ಲಿಯೇ ಪಡೆದುಕೊಂಡಿರುವ ಕಾರಣ ನಿಪಿ11 ಮತ್ತು 12 ರ ಪ್ರಕರಣಗಳಲ್ಲಿ ಪಕ್ಷಗಾರರಲ್ಲ ಎಂದರೆ ಸಾಕ್ಷಿ ಭಾಗಶಃ ಹಣ ತೆಗೆದುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನಿಪಿ24 ರಲ್ಲಿ ಭಾಗಶಃ ಹಣ ಮಾತ್ರ ಪಡೆದುಕೊಂಡಿರುವುದು ಬಎಂದು ಬರೆದಿದೆಯಾ ಎಂದರೆ ಸಾಕ್ಷಿ ಆ ರೀತಿ ಬರೆದಿಲ್ಲ, ನಾವೇ ಸಮಕ್ಷಮ ಮಾತನಾಡಿ ಬಂದ ಮೇಲೆ ತೆಗೆದುಕೊಳ್ಳೋಣ ಎಂದು ಸ್ವೀಕೃತಿ ಪತ್ರದ ಹಿಂದೆ ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಈಗಾಗಲೆ ನೀವು ಹಣ ತೆಗೆದುಕೊಂಡಿದ್ದು, ಮತ್ತೆ ಕ್ಲೇಮ್ ಮಾಡುವುದಕ್ಕೋಸ್ಕರ ನಿಪಿ24 ರಲ್ಲಿ ಸಾಕ್ಷಿ ಸಹಿಯಾದ ನಂತರ ಒಂದು ಲೈನ್ ಒಕ್ಕಣೆ ಬರೆದು ಸೃಷ್ಟಿ ಮಾಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ದುಡ್ಡು ಬರದೇ ಇದ್ದ ಪಕ್ಷದಲ್ಲಿ ನೀವು ಮಂಡ್ಯದ ನ್ಯಾಯಾಲಯದ ಪ್ರಕರಣಗಳಲ್ಲಿ ಪಾರ್ಟಿಯಾಗಿ ಸೇರಿಕೊಳ್ಳುತ್ತಿದ್ದಿರಿ, ನಿಮಗೆ ದುಡ್ಡು ಬಂದಿರುವ ಕಾರಣ ಆ ಪ್ರಕರಣಗಳಲ್ಲಿ ಪಕ್ಷಗಾರರಾಗಿ ಸೇರಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮಗೆ ಅನುಕೂಲವಾಗಲಿ ಎಂದು ಕೆಲವು ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ, ಎಲ್ಲವೂ ಸರ್ಕಾರದ ಆದೇಶ ಎಂದು ಉತ್ತರಿಸುತ್ತಾರೆ. ದಾವ ಜಮೀನುಗಳಲ್ಲಿ ಬಂದಿರುವ ಪರಿಹಾರದ ಮೊತ್ತದಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ಮಾತ್ರ ಹಕ್ಕಿರುವುದು ನಿಮಗೆ ಯಾವುದೇ ರೀತಿಯ ಹಕ್ಕಿರುವುದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಪ್ರತಿವಾದಿ 1 ರಿಂದ 3 ರವರ ಕುಟುಂಬಕ್ಕೆ ಸಂಬಂದ ಪಡದ ವ್ಯಕ್ತಿಯಾಗಿರುವುದರಿಂದ

ನಿಮಗೆ ಆ ಮೊತ್ತದಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿ ಹಕ್ಕಿದೆ, ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಸಾಧ್ಯವಾದರೆ ಅಕ್ರಮವಾಗಿ ಸಂಪಾದನೆ ಮಾಡುವ ಉದ್ದೇಶದಿಂದ ಪ್ರತಿವಾಡದಿ 1 ರಿಂದ 3 ರವರ ವಿರುದ್ಧ ಸುಳ್ಳು ಕೇಸು ಹಾಕಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.